ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 79-83.
©*IIMRD*, Mysuru
www.iimrd.com

# ಮೈಸೂರು ಕಾಂಗ್ರೆಸ್ಸಿನ ಹೋರಾಟದಲ್ಲಿ ಮಹಿಳೆಯರ ಪಾತ್ರ (1920–1947): ಒಂದು ಅಧ್ಯಯನ

**ರಾಜೇಶ್ ವಿ.ಎಸ್.**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ದೇಶದ ಸ್ವಾತಂತ್ರ್ಯ ಸಂಗ್ರಾಮದ ಜವಾಬ್ದಾರಿ ಹೊತ್ತ ಹೆಗಲುಗಳು ಕೇವಲ ಪುರುಷರಷ್ಟೇ ಅಲ್ಲ, ಜೊತೆಗೆ ಅನೇಕ ಮಹಿಳೆಯರು ಕಾರಣೀಭೂತರಾಗಿದ್ದಾರೆ. ಕರ್ನಾಟಕದಲ್ಲಿ ಮೈಸೂರು ಕಾಂಗ್ರೆಸ್ಸಿನ ಅಡಿಯಲ್ಲಿ ನಡೆದ ಹಲವು ಚಳುವಳಿಗಳಲ್ಲಿ ಅನೇಕ ಮಹಿಳೆಯರು ಭಾಗವಹಿಸಿದ್ದು, ಅಪಾರ ಕೊಡುಗೆ ನೀಡಿದ್ದಾರೆ. ಆದರೆ ದುರಾದೃಷ್ಟವಶಾತ್ ಮಹಿಳೆಯರು ಇತಿಹಾಸದ ಮುಖ್ಯವಾಹಿನಿಯಲ್ಲಿ ಸಿಗುವುದು ತುಂಬಾ ವಿರಳ. ಹಾಗೆಯೇ ಸ್ವಾತಂತ್ರ್ಯ ಸಮರದಲ್ಲಿ ಪ್ರಾದೇಶಿಕ ಏರುಪೇರು ಇರುವಂತೆ ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲಿಯು ಕೂಡ ಅದೇ ರೀತಿಯ ಅಸಮತೋಲನ ರಾಜ್ಯದೆಲ್ಲೆಡೆ ಕಂಡುಬರುತ್ತದೆ. ಕೆಲವು ಕಡೆ ಮಹಿಳೆಯರ ಭಾಗವಹಿಸುವಿಕೆ ಬಿರುಸುನಿಂದ ಕೂಡಿದ್ದರೆ ಕೆಲವೇಡೆ ನಗಣ್ಯ ಎನ್ನುವಷ್ಟು ಕಡಿಮೆಯಾಗಿತ್ತು. ಪ್ರಸ್ತುತ ಲೇಖನದಲ್ಲಿ ಮೈಸೂರು ಕಾಂಗ್ರೆಸ್ಸಿನ ಹೋರಾಟದಲ್ಲಿ ಮಹಿಳೆಯರ ಪಾತ್ರವೇನು ಎಂಬುದನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಮೈಸೂರು ಕಾಂಗ್ರೆಸ್, ಸ್ವಾತಂತ್ರ್ಯ ಹೋರಾಟ, ಮಹಿಳೆಯರ ಪಾತ್ರ.

**ಪೀಠಿಕೆ**

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಪತಿ ಇಲ್ಲವೇ ಪುತ್ರರ ಚಳುವಳಿಯ ಚಟುವಟಿಕೆಗಳಿಗೆ ಬೆಂಗಾವಲಾಗಿ ನಿಂತು, ಪುರುಷರ ಜೊತೆ ಚಳುವಳಿ ನಡೆಸಿ ಸೆರೆಮನೆ ಸೇರಿದ್ದಾರೆ. ಸಭೆ, ಸಮಾರಂಭ ಮತ್ತು ಮೆರವಣಿಗೆಗಳಲ್ಲಿ ಭಾಗವಹಿಸಿ, ಲಾಟಿ ಏಟುಗಳನ್ನು ತಿಂದ ಅಸಂಖ್ಯಾತ ವೀರ ನಾರಿಯರಿದ್ದಾರೆ. 1920ರ ಅಸಹಕಾರ ಚಳುವಳಿಯಿಂದ ಹಿಡಿದು 1947ರ ಮೈಸೂರು ಚಲೋ ಚಳುವಳಿಯವರೆಗೆ ಪ್ರಮುಖವಾಗಿ ಕಾಣಿಸಿರುವ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು ಎಂದರೆ ಕಮಲಾಬಾಯಿ ಚಟ್ಟೋಪಾಧ್ಯಾಯ, ಕೃಷ್ಣಬಾಯಿ ಪಣಜಿಕರ್, ಉಮಾಬಾಯಿ ಕುಂದಾಪುರ, ಯಶೋದರಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ತಿರುಮಲೆ ರಾಜಮ್ಮ, ರಾಧಾ ದಿವಾಕರ್, ಸೀತಾಬಾಯಿ ಸಫರ್, ಆನಂದಿಬಾಯಿ ಹನಕಟ್ಟಿ, ಗೌರಮ್ಮ ,

*Please cite this article as:* *ರಾಜೇಶ್ ವಿ.ಎಸ್.* (2024). ಮೈಸೂರು ಕಾಂಗ್ರೆಸ್ಸಿನ ಹೋರಾಟದಲ್ಲಿ ಮಹಿಳೆಯರ ಪಾತ್ರ (1920–1947): ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 79–83.*

ಸುಬ್ಬಮ್ಮ ಜೋಯಿಸ್, ಕಣೆ ಬೊಮ್ಮಕ್ಕ, ಅನ್ನಪೂರ್ಣ ದೇವಿ ಹಾಗೂ ಇನ್ನೂ ಹಲವು ಮಹಿಳಾ ಹೋರಾಟಗಾರರನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ.

ಕರ್ನಾಟಕದಲ್ಲಿ ನಡೆದ ಅಂಕೋಲದ ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರಾದ ಉಮಾ ಬಾಯಿ ಕುಂದಾಪುರ, ಕೃಷ್ಣಬಾಯಿ ಪಣಜಿಕರ್ ಮತ್ತು ರಾಧಾ ದಿವಾಕರ್ ಪ್ರಮುಖರಾಗಿದ್ದು, ಅಂಕೋಲಾದ ನೆರೆಯ ಭಾಗಗಳಲ್ಲಿ ಸ್ತ್ರೀಯರನ್ನು ಸಂಘಟಿಸಿ ರಾಷ್ಟ್ರೀಯತೆ, ಸಭೆ, ಸಂಘಟನೆ, ಸ್ವಾತಂತ್ರ್ಯ ಪ್ರಜ್ಞೆ ಮತ್ತು ಹೋರಾಟದ ಪರಿಕಲ್ಪನೆಗಳನ್ನು ಮೂಡಿಸಿದರು[1]. ಉಮಾ ಬಾಯಿ ಕುಂದಾಪುರ ಇವರು 1932 ರಲ್ಲಿ ಕೆಪಿಸಿಸಿ ಚಳುವಳಿಯ ಸರ್ವಾಧಿಕಾರಿ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದು, ಕಾಂಗ್ರೆಸ್ ಸಂಘಟನೆಗೆ ಒಂದು ಲಕ್ಷ ರೂಪಾಯಿಗಳಷ್ಟು ನಿಧಿ ಸಂಗ್ರಹಿಸಿ ಕೊಟ್ಟರು[2]. 1934 ರಲ್ಲಿ ಬಿಹಾರದಲ್ಲಿ ಆದ ಭೂಕಂಪದ ಸಂತ್ರಸ್ತರ ನೆರವಿಗೆ ಧಾವಿಸಿದ್ದು, ಹಲವು ಬಾರಿ ಸೆರೆಮನೆ ವಾಸ ಅನುಭವಿಸಿದ ಮಹಿಳೆಯಾಗಿದ್ದಾರೆ. ಕೃಷ್ಣಬಾಯಿಯವರು ಕೆಪಿಸಿಸಿ ಸಮಿತಿ ಅಧ್ಯಕ್ಷೆಯಾಗಿ ಹಾಗೂ ಭಗಿನಿ ಮಂಡಲ, ತಿಲಕ್ಕನ್ಯಾಶಾಲಾ, ಮತ್ತು ಹಿಂದುಸ್ತಾನಿ ಸೇವಾದಳ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿಯು ಕಾರ್ಯನಿರ್ವಹಿಸಿದ್ದಾರೆ. ಹಾಗೆಯೇ 1941ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದಲ್ಲಿಯೂ ಭಾಗವಹಿಸಿ ಆರು ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿದ್ದಾರೆ.[3] ರಾಧಾ ದಿವಾಕರ್ ಎಂಬ ಮಹಿಳೆಯು ಪುರುಷರೊಂದಿಗೆ ಜಾಥಾ ಹೊರಟು ಆ ಮೂಲಕ ಹಣ ಮತ್ತು ದವಸ ಧಾನ್ಯಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕರಾ ನಿರಾಕರಣೆ ಚಳುವಳಿಯು ಪ್ರಮುಖವಾಗಿ ಅಂಕೋಲಾ, ಶಿರಸಿ, ಸಿದ್ದಾಪುರ ಭಾಗದಲ್ಲಿನ ರೈತರ ಸಂಕಷ್ಟಗಳ ವಿರುದ್ಧವಾಗಿ ಮೊದಲು ಆರಂಭವಾದಾಗ ಕರ ವಸೂಲಿಗೆ ಮನೆ ಮನೆಗೆ ಬಂದ ಪೊಲೀಸ್ ಅಧಿಕಾರಿಗಳು ಮತ್ತು ಶಿರಸ್ತೆದಾರರಿಂದ ತಮ್ಮ ಮನೆಯ ಗಂಡಸರನ್ನು ಹಾಗೂ ತಮ್ಮ ಮನೆಗಳ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಕಾಪಾಡುವಲ್ಲಿ ಅನೇಕ ಮಹಿಳೆಯರು ವಹಿಸಿದ ಪಾತ್ರ ಆಗಾಧವಾದುದಾಗಿದೆ. ಹಾಗೆಯೇ ಟಿಪ್ಪು ಅಮ್ಮಣ್ಣನಾಯಕಿ ಎಂಬ ಮಹಿಳೆಯು ಪೊಲೀಸರ ಎದುರು ನಿಂತು, ನೀವು ಗಾಂಧೀಜಿಗಿಂತ ದೊಡ್ಡವರೂ ಅಲ್ಲ, ತಿಳಿದವರೂ ಅಲ್ಲ ನಿಮ್ಮ ನೌಕರಿಗಾಗಿ ನಮ್ಮ ಸ್ವರಾಜ್ಯಕ್ಕೆ ಅಡ್ಡಿ ಬರಬೇಡಿ, ಸಾಧ್ಯವಾದರೆ ನೀವೂ ಸಹ ವೃತ್ತಿ ತ್ಯಜಿಸಿನಮ್ಮೊಂದಿಗೆ ಸತ್ಯಾಗ್ರಹವನ್ನು ಬೆಂಬಲಿಸಿ ಎಂದು ತಿಳಿಹೇಳಿದಳು. ಹಾಗೆಯೇ ಕಣೆ ಬೊಮ್ಮಕ್ಕ ಎಂಬ ಮಹಿಳೆಯು ಪೊಲೀಸರ ಕಣ್ಣು ತಪ್ಪಿಸಿ ಕೋರ್ಟ್ ಬಳಿ ಬರುತ್ತಿದ್ದ ಮುಂಬೈ ಗೌರ್ನರ್ ಆಗಮನದ ವೇಳೆಕಪ್ಪು ಬಾವುಟ ಹಿಡಿದು ಘೋಷಣೆ ಕೂಗಿ ಸೆರೆಮನೆ ಸೇರಿದಳು.

ಕರ ನಿರಾಕರಣೆಯ ಮುಂದುವರಿದ ಭಾಗವಾಗಿ ಉಪವಾಸ ಸತ್ಯಾಗ್ರಹ ನಡೆದಾಗ ಪ್ರಮುಖವಾಗಿ ಶಿವಮೊಗ್ಗ ಜಿಲ್ಲೆಯ ಹೆಜ್ಜೆ, ಮಾವಿನಗುಡಿ, ತಿಗಣಿ, ಹೊಸತೋಟ ಮುಂತಾದ ಕಡೆ ಅನೇಕ ಮಹಿಳೆಯರು ಕರ ನಿರಾಕರಿಸಿದ್ದರ ಪರಿಣಾಮವಾಗಿ ತಮ್ಮ ಮನೆಗಳಲ್ಲಿ ಜಪ್ತಿ ಮಾಡಿದ ವಸ್ತುಗಳನ್ನು ವಾಪಸ್ ಪಡೆಯಲು ಗೌರಮ್ಮ, ಕಲ್ಯಾಣಮ್ಮ, ನಾಗವೇಣಿ, ಪರಮೇಶ್ವರಮ್ಮ ಮುಂತಾದವರು ಹೋರಾಟ ನಡೆಸಿದ್ದಾರೆ.

ಪ್ರಮುಖವಾಗಿ ಮೈಸೂರು ಸಂಸ್ಥಾನದ ಸುಬ್ಬಮ್ಮ ಜೋಯಿಸರು ದಸ್ತಗಿರಿಯಾಗಿ ಆರು ತಿಂಗಳು ಸೆರೆಮನೆ ವಾಸದಲ್ಲಿ ಇದ್ದಾಗ ಅವರ ಕನ್ನಡಕ ಮತ್ತು ಮಂಗಳಸೂತ್ರಗಳನ್ನು ಕೊಡದೆ ಹಿಂಸೆಗೆ

ಒಳಪಡಿಸಿದರು[4] ಆಗ ಸುಬ್ಬಮ್ಮ ಜೋಯಿಸ್ ಸೆರೆಮನೆಯ ಸ್ತ್ರೀಯರನ್ನು ಒಟ್ಟುಗೂಡಿಸಿ ಮಂಗಳಸೂತ್ರ ದಿನವನ್ನು ಆಚರಣೆ ಮಾಡಿದರು. ಆಗ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ ಕಮಲಾದೇವಿ ಚಟ್ಟೋಪಾಧ್ಯಾಯರು ಮಂಗಳ ಸೂತ್ರವನ್ನು ವಾಪಸ್ ಕೊಡಿಸಿದರು. ಆದರೆ ಕನ್ನಡಕವನ್ನು ಕೊಡಲಿಲ್ಲ ಹಾಗಾಗಿ ಸಾಕಷ್ಟು ಹಿಂಸೆಯನ್ನು ಸುಬ್ಬಮ್ಮ ಜೋಯಿಸರು ಅನುಭವಿಸಬೇಕಾಯಿತು.

ಮೈಸೂರು ಸಂಸ್ಥಾನದ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಿ ನಡೆದ 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪ್ರಮುಖ ಮಹಿಳೆಯಾಗಿ ಬಳ್ಳಾರಿ ಸಿದ್ದಮ್ಮನವರು ಕಾಂಗ್ರೆಸ್ ಬಾವುಟ ನಮ್ಮ ಸಮಗ್ರತೆ, ಏಕತೆ ಮತ್ತು ಆತ್ಮಗೌರವದ ಸಂಕೇತವಾಗಿದೆ. ಪುರುಷರಿಗೆ ಇದರ ಬದ್ಧತೆ ಏನೇ ಇರಲಿ ನಾವು ಧ್ವಜಾರೋಹಣ ಮಾಡಿಯೇ ಮಾಡುತ್ತೇವೆ ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂಬ ಏಕಭಾವನೆಗೆ ಎಲ್ಲರೂ ಒಪ್ಪಿದಾಗ, ಧ್ವಜ ಸತ್ಯಾಗ್ರಹದ ಮೂರನೇ ದಿನವಾದ ಏಪ್ರಿಲ್ 13, 1938 ರಂದು ಕೆ.ಟಿ. ಭಾಷಮ್ರವರ ದಸ್ತಗಿರಿಯ ನಂತರ ಬಳ್ಳಾರಿ ಸಿದ್ದಮ್ಮನವರು ಧ್ವಜಾರೋಹಣ ಮಾಡಿ ಸೆರೆಯಾದರೂ.5 ಈ ವಿಷಯ ಮರುದಿನ ಸಂಸ್ಥಾನದ ಪತ್ರಿಕೆಗಳಲ್ಲಿ ಬಂದಂತೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದಂತೆ **"ಕರ್ನಾಟಕದ ವೀರ ಮಹಿಳೆಯರು"** ಎಂಬ ಶೀರ್ಷಿಕೆಯ ಅಡಿಯಲ್ಲಿ ಗಂಡಸರಂತೆ ಬ್ರಿಟಿಷ್ ಸರ್ಕಾರಕ್ಕೆ ಸೆಡ್ಡು ಒಡೆದು ಧ್ವಜಾರೋಹಣ ಮಾಡಿದ ವೀರ ಮಹಿಳೆಯರು ಎಂದು ಮುದ್ರಿಸಿತ್ತು.

ಕೆಲ ದಿನಗಳ ನಂತರ ಮೈಸೂರು ಸಂಸ್ಥಾನದ ರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಬಳ್ಳಾರಿ ಸಿದ್ದಮ್ಮನವರನ್ನು ಅರಮನೆಗೆ ಆಹ್ವಾನಿಸಿದರು. ಆದರೆ ಸಿದ್ದಮ್ಮನವರು, ನಾನು ಒಬ್ಬಳೇ ನಿಮ್ಮ ಆತಿಥ್ಯವನ್ನು ಸ್ವೀಕರಿಸಲಾರೆ ನನ್ನೊಂದಿಗೆ ಬಂಧಿತರಾದ ಎಲ್ಲರನ್ನೂ ಸ್ವಾಗತಿಸಿದರೆ ನಾನು ಸಹ ಒಪ್ಪುವೆ ಎಂದು ನುಡಿದ ಬಳ್ಳಾರಿ ಸಿದ್ದಮ್ಮನ ಘನತೆ, ಗೌರವ ಮತ್ತಷ್ಟು ಹೆಚ್ಚಿಸಿತು. ಹಾಗೆಯೇ ಗಾಂಧೀಜಿಯ ಅಭಿಲಾಷೆಯಂತೆ ತಮ್ಮ ಮಗಳ ವಿವಾಹವನ್ನು ಜಾತ್ಯತೀತವಾಗಿ ಧ್ವಜದ ಅಡಿ ನೆರವೇರಿಸಿದ್ದರು. ಪ್ರಸೂತಿ ಗೃಹ, ಮಾತೃ ಮಂದಿರ, ವೃದ್ಧಾಶ್ರಮ, ಅನಾಥ ಮಕ್ಕಳ ಶಾಲೆ, ಮತ್ತು ಹೆರಿಗೆ ಆಸ್ಪತ್ರೆಗಳನ್ನು ಸ್ಥಾಪಿಸಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.[6]

ಯಶೋಧರಮ್ಮ ದಾಸಪ್ಪ ಎಂಬ ಮತ್ತೊಬ್ಬ ಪ್ರಮುಖ ಮಹಿಳೆಯು ಸಹ ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡಿದ್ದು, ಅನೇಕ ಬಾರಿ ಸೆರೆಮನೆವಾಸ ಅನುಭವಿಸಿ ಹಳೇ ಮೈಸೂರು ಭಾಗದ ಮಹಿಳೆಯರಿಗೆ ಸ್ಫೂರ್ತಿಯ ನೆಲೆಯಾದರು.[7] ಹರಿಜನ ಕನ್ಯೆ ಒಬ್ಬಳನ್ನು ಸಾಕು ಮಗಳಾಗಿ ಸ್ವೀಕರಿಸಿದ್ದರು. ಅಂತಿಮವಾಗಿ ಶಾಸಕಿಯಾಗಿ, ರಾಜ್ಯದ ಮಂತ್ರಿಯಾಗಿ ದುಡಿದು ಪಾನ ನಿರೋಧದ ರದ್ಧತಿಯ ಸಂಬಂಧವಾಗಿ ಮಂತ್ರಿ ಪದವಿಗೆ ರಾಜಿನಾಮೆ ನೀಡಿ, ತಮ್ಮ ತತ್ವನಿಷ್ಠೆಯನ್ನು ಪ್ರದರ್ಶಿಸಿದರು. ಹಾಗೆಯೇ ಸುಬ್ಬಮ್ಮ ಜೋಯಿಸ್ ಎಂಬ ಮಹಿಳೆಯು ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಭಾಗವಹಿಸಿದ್ದು ಮೈಸೂರು ಭಾಗದಲ್ಲಿ ಅಧಿವೇಶನದ ಪ್ರಚಾರ ಕಾರ್ಯ ಮಾಡಿ ಹಲವು ಬಾರಿ ಜೈಲುವಾಸ ಅನುಭವಿಸಿದ ಮತ್ತೊಬ್ಬ ಪ್ರಮುಖ ಮಹಿಳೆ.[8]

1939ರ ಅರಣ್ಯ ಸತ್ಯಾಗ್ರಹವು ಮೈಸೂರು ಸಂಸ್ಥಾನದಲ್ಲಿ ಯಶಸ್ವಿ ನಡೆಯಿತು. ಮದ್ಯಪಾನ ನಿಷೇಧಿಸಲು ವಿಫಲವಾದ ಮೈಸೂರು ಸರ್ಕಾರದ ವಿರುದ್ಧವಾಗಿ ಈಚಲು ಮರಗಳನ್ನು ಕಡಿಯುವ ಚಳುವಳಿಯಲ್ಲಿಯೂ ಮಹಿಳೆಯರು ಭಾಗಿಯಾಗಿದ್ದರು.[9] ಈ ಹೋರಾಟ ಪ್ರಮುಖವಾಗಿ ಚಿತ್ರದುರ್ಗ

ಜಿಲ್ಲೆಯ ತುರುವೇಕೆರೆ, ದೊಡ್ಡ ಗದ್ದವನಹಳ್ಳಿ, ಚಿಕ್ಕ ಗದ್ದವನಹಳ್ಳಿ ಭಾಗಗಳಲ್ಲಿ ನಡೆಯಿತು. ತುರುವನೂರು ಅರಣ್ಯ ಸತ್ಯಾಗ್ರಹದಲ್ಲಿ ಪ್ರಮುಖ ರಾಜಕಾರಣಿಯಾದ ಎಸ್. ನಿಜಲಿಂಗಪ್ಪನವರೊಂದಿಗೆ ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ ಹಿರೇಮಠ್, ತಿಮ್ಮಕ್ಕ, ಭೀಮಕ್ಕ ಮುಂತಾದವರು ಈಚಲು ಗಿಡ ಮರಗಳನ್ನು ಕಡಿದು ದಸ್ತಗಿರಿಯಾದರು.[10]

ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಮೈಸೂರು ಸಂಸ್ಥಾನದ ಭಾಗಗಳಾದ ಬೆಂಗಳೂರು, ತುಮಕೂರು, ಮೈಸೂರು, ಚಿತ್ರದುರ್ಗ, ಶಿವಮೊಗ್ಗದ ಈಸೂರು ಮುಂತಾದ ಕಡೆ ನಡೆದ ಚಳುವಳಿಯಲ್ಲಿ ಹಲವಾರು ಮಹಿಳೆಯರು ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರು ತಮ್ಮ ಗುಪ್ತ ವಾಸಸ್ಥಾನದಿಂದ ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ಬಣಶಂಕರಿ ದೇವಾಲಯದಲ್ಲಿ ಸಭೆ ಸೇರಿಸಿ ಭಾಷಣ ಮಾಡುವ ಮುಖಾಂತರ ನೂರು ಜನರನ್ನು 14 ಗುಂಪುಗಳಾಗಿ ಮಾಡಿಕೊಂಡು ಚಳುವಳಿಯನ್ನು ಮುಂದುವರಿಸಿದರು.[11] ಬೆಂಗಳೂರಿನ ಮಹಾರಾಣಿ ಕಾಲೇಜಿನ ಉಪನ್ಯಾಸಕಿಯಾದ ಕೇಸರಿ ಕೇಶವನ್ ಎಂಬ ಮಹಿಳೆ ತಮ್ಮ ವೃತ್ತಿಗೆ ರಾಜೀನಾಮೆ ನೀಡಿ ಮಹಿಳಾ ವಿದ್ಯಾರ್ಥಿಗಳ ನಾಯಕತ್ವ ವಹಿಸಿ, ದಿವಾನರು ಮತ್ತು ಶಿಕ್ಷಣ ಮಂತ್ರಿಗಳ ಮನೆ ಮುಂದೆ ಪಿಕೆಟಿಂಗ್ ಮಾಡಿಸಿ ವಿಶೇಷ ರೀತಿಯ ಮೆರವಣಿಗೆ ಮತ್ತು ಪ್ರತಿಭಟನೆ ಮಾಡಿದರು.[12] ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಶಿವಮೊಗ್ಗದ ಈಸೂರು ಗ್ರಾಮವು ತುಂಬಾ ಪ್ರಾಮುಖ್ಯತೆ ಪಡೆದಿದೆ. ಈ ಹೋರಾಟದಲ್ಲಿ ಆಲಮ್ಮ, ಸಿದ್ದಮ್ಮ ಮತ್ತು ಪಾರ್ವತಮ್ಮ ಎಂಬ ಮೂರು ಮಹಿಳೆಯರು ಜೀವಾವಧಿ ಶಿಕ್ಷೆಗೆ ಗುರಿಯಾಗಿ ಅಂತಿಮವಾಗಿ ಮೂರು ವರ್ಷ ಆರು ತಿಂಗಳ ನಂತರ ಸೆರೆಮನೆಯಿಂದ ಬಿಡುಗಡೆಯಾದರು.[13] ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ ತುಮಕೂರು ಮತ್ತು ಮೈಸೂರು ಭಾಗಗಳಲ್ಲಿ ಶೇಷಮ್ಮ, ಅಮೃತಬಾಯಿ, ಸರೋಜಮ್ಮ, ಸಾವಿತ್ರಮ್ಮ, ಇಂದಿರಮ್ಮ, ಭಗೀರಥಮ್ಮ ಎಂಬುವರು ಸಹ ಚಳುವಳಿಯಲ್ಲಿ ಭಾಗವಹಿಸಿದ್ದರು.

ಅಂತಿಮವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರಿನ ಜನತೆಗೆ ಸ್ವಾತಂತ್ರ ಬರಲಿಲ್ಲವೆಂದು ಮೈಸೂರು ಕಾಂಗ್ರೆಸ್ ನಾಯಕರು ಮೈಸೂರು ಚಲೋ ಚಳುವಳಿ ಅಥವಾ ಅರಮನೆ ಸತ್ಯಾಗ್ರಹ ಹಮ್ಮಿಕೊಂಡಾಗ ಅನೇಕ ಮಹಿಳೆಯರು ಭಾಗವಹಿಸಿದರು. ಈ ಚಳುವಳಿಯಲ್ಲಿ ಬಳ್ಳಾರಿ ಸಿದ್ದಮ್ಮ, ಯಶೋದರಮ್ಮ ದಾಸಪ್ಪ ಮತ್ತು ಸಿದ್ದಮ್ಮ ಜೋಯಿಸ್ ಅವರು ಸಕ್ರೀಯವಾಗಿ ಭಾಗವಹಿಸಿದರು. ಶಿವಮೊಗ್ಗ ಭಾಗದಲ್ಲಿ ಪೊನ್ನಮ್ಮ, ರಂಗುಭಾಯಿಯವರು ಬೆಂಗಳೂರಿನಲ್ಲಿ ಜೈಲುವಾಸ ಅನುಭವಿಸಿದರು.[14]

ಅಂತಿಮವಾಗಿ ಇವುಗಳ ಜೊತೆಗೆ ಮದ್ಯಪಾನ ನಿಷೇಧ ಚಳುವಳಿಯಲ್ಲಿಯೂ ಬಳ್ಳಾರಿ ಸಿದ್ದಮ್ಮ, ಗೌರಿಬಿದನೂರಿನ ಅನ್ನಪೂರ್ಣ ದೇವಿಯವರು ಮೈಸೂರು ಸರ್ಕಾರದ ವಿರುದ್ಧ ಹೋರಾಟ ಮಾಡಿದರು. ಶಿವಮೊಗ್ಗದ ಶ್ರೀಮತಿ ರತ್ನಮ್ಮ ಮದ್ಯಪಾನನಿರೋಧ ಹೋರಾಟದಲ್ಲಿ ಜೈಲು ಸೇರಿದ ಮಹಿಳೆಯಾಗಿದ್ದಾರೆ. ವಿದ್ಯಾರ್ಥಿಯಾಗಿರುವಾಗಲೇ ಕಾಂಗ್ರೆಸ್‌ನ ಸದಸ್ಯರಾಗಿ ಮೈಸೂರು ಸೆನೆಟ್‌ನ ಸದಸ್ಯರಾಗಿ ಮಹಿಳೆಯರ ಪ್ರಗತಿಗೆ ಶ್ರಮಿಸಿದರು.[15]

**ಉಪಸಂಹಾರ**

ಸ್ವಾತಂತ್ರ್ಯ ಹೋರಾಟದ ಆರಂಭಿಕ ಚಳುವಳಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಿತ್ತು. ಕಾಲಾನಂತರದಲ್ಲಿ ಹಲವಾರು ಮಹಿಳೆಯರು ಗಾಂಧಿ ವಿಚಾರಗಳಿಂದ ಪ್ರೇರಿತರಾಗಿ ನೇರವಾಗಿ ಸ್ವಾತಂತ್ರ್ಯ

ಸಂಗ್ರಾಮದಲ್ಲಿ ಭಾಗವಹಿಸಿದರೆ ಮತ್ತೆ ಕೆಲವರು ಹೋರಾಟದಲ್ಲಿ ಭಾಗವಹಿಸುತ್ತಿದ್ದ ತಮ್ಮ ಗಂಡ, ಮಕ್ಕಳು ಸೋದರರ ಬೆನ್ನೆಲುಬಾಗಿ ನಿಂತರು. ಹೀಗೆ ಅದೆಷ್ಟೋ ವೀರ ಮಹಿಳೆಯರು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ತಮ್ಮ ತನು, ಮನ, ಧನ ಹಾಗೂ ಪ್ರಾಣವನ್ನೇ ಅರ್ಪಿಸಿದರು.

**ಕೊನೆಟಿಪ್ಪಣಿ**

1. ಸೂರ್ಯನಾಥ ಯು ಕಾಮತ್. ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು. ಪು.ಸಂ.26.
2. ರಘುನಾಥ್ ಶಂಕರಪ್ಪ. ಬೀದರ್ ಪ್ರದೇಶದ ಸ್ವಾತಂತ್ರ್ಯ ಸಂಗ್ರಾಮ. ಪು.ಸಂ.111.
3. ಸೂರ್ಯನಾಥ್ ಯು ಕಾಮತ್. ಪೂರ್ವೋಕ್ತ. ಪು.ಸಂ. 25.
4. ಅದೇ. ಪು.ಸಂ.29.
5. ಲಿಂಗಯ್ಯ. ಖ. ಶಿವಪುರ ಧ್ವಜ ಸತ್ಯಾಗ್ರಹ. ಪು.ಸಂ.175.
6. ಅದೇ. ಪು.ಸಂ.186.
7. ಸೂರ್ಯನಾಥ್ ಯು ಕಾಮತ್. ಪೂರ್ವೋಕ್ತ. ಪು.ಸಂ.27.
8. ಸೂರ್ಯನಾಥ ಯು ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. ಸಂಪುಟ–2. ಪು.ಸಂ.302.
9. ರಾಮಸ್ವಾಮಿ. ಎಸ್. ಆರ್. ಸ್ವಾತಂತ್ರ್ಯೋಧಯದ ಮೈಲುಗಲ್ಲುಗಳು. ಪು.ಸಂ.20.
10. ಲಿಂಗಯ್ಯ. ಡಿ. ಸತ್ಯಾಗ್ರಹಿಗಳ ನೆನಪುಗಳು. ಪು.ಸಂ. 187.
11. ವಿಶ್ವ ಕುಂದಾಪುರ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು. ಪು.ಸಂ. 79.
12. ಅದೇ. ಪು.ಸಂ. 75.
13. ದಿವಾಕರ. ಡಿ.ಎಸ್. ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು. ಪು.ಸಂ. 62.
14. ಅದೇ. ಪು.ಸಂ. 94.
15. ಅದೇ. ಪು.ಸಂ. 95.

**ಪರಾಮರ್ಶನ ಗ್ರಂಥಗಳು**


- ಹಾಲಪ್ಪ ಜಿ.ಎಸ್. (1968). ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ (ಸಂ.2) ಗವರ್ನಮೆಂಟ್ ಆಫ್ ಕರ್ನಾಟಕ.
- ನಾಗರತ್ನಮ್ಮ ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನುಭಂಗ ಚಳುವ.* ದೇಶಿ ಪ್ರಕಾಶನ.
- ನಾಗರತ್ನಮ್ಮ ಎಸ್. (2006). *ಬಳ್ಳಾರಿ ಸಿದ್ದಮ್ಮ ಜೀವನ ಚರಿತ್ರೆ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ಸರೋಜಿನಿ ಸಿಂಧ್ರಿ ಮತ್ತು ಕೆ.ರಾಘವೇಂದ್ರ, ವಿಮನ್ ಫ್ರೀಡಂ ಫೈಟರ್ಸ್ ಇನ್ ಕರ್ನಾಟಕ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಸೂರ್ಯನಾಥ ಯು ಕಾಮತ್. (1977). ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ.1.2.3, ಗೀತಾ ಬುಕ್ ಹೌಸ್.